ದಿನಾಂಕ 25-04-2018 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟಿ ಸವಾಲು ಃ ಶ್ರೀ ಎ ವಿ ಕೆ ವಕೀಲರಿಂದ

- - - - -

ಈ ದಾವೆಯನ್ನು 7 ಹುಣಸೆ ಮರಗಳು ನನಗೆ ಸೇರಿದ್ದು ಯಾರು ತಕರಾರು ಮಾಡಬಾರದೆಂದು ಹಾಕಿರುತ್ತೇನೆ. ನಾನು ಪ್ರತಿವಾದಿ 1 ರಿಂದ 5 ರವರ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಸೊತ್ತಿನ ಸರ್ವೆ ನಂಬರ 629 ಡಿ 1 ರ ವಿಸ್ತೀರ್ಣ 5 ಎಕರೆ 15 ಸೆಂಟ್ಸ ಜಮೀನಿನ ಬಗ್ಗೆ ಹಾಕಿರುತ್ತೇವೆ. ಸದರಿ ಜಮೀನಿನ ಚೆಕ್ ಬಂದಿ

ಪೂರ್ವಕ್ಕೆ ಸರ್ವೆ ನಂಬರ 629 ಡಿ 2 ಜಮೀನು ಇರುತ್ತದೆ.
ಪಶ್ಚಿಮಕ್ಕೆ ಸರ್ವೆ ನಂಬರ 629 ಎ ಬಿ ಮತ್ತು ಸಿ ಜಮೀನು ಇರುತ್ತದೆ.
ಉತ್ತರಕ್ಕೆ ರಸ್ತೆ
ದಕ್ಷಿಣಕ್ಕೆ ಸರ್ವೆ ನಂಬರ 629 ಇ ಜಮೀನು ಬರುತ್ತದೆ.

ದಾವಾ ಸೊತ್ತುಮೂಲತಹ ನಮ್ಮ ಅಜ್ಜಿ ತುಂಗಮ್ಮ ನವರ ಹೆಸರಿನಲ್ಲಿರುತ್ತದೆ. ತುಂಗಮ್ಮನವರಿಗೆ ಒಬ್ಬ ಗಂಡು ಮಗ ಹಾಗೂ ಎರಡು ಜನ ಹೆಣ್ಣು ಮಕ್ಕಳು ಇರುತ್ತಾರೆ ಅವರೆಂದರೆ, ಜೀಜಾಬಾಯಿ ಮತ್ತು ಶ್ಯಾಮಲಾಬಾಯಿ ಯವರು ಇರುತ್ತಾರೆ. ದಾವಾ ಜಮೀನು ಅಜ್ಜಿಯವರ ಹೆಸರಿನಲ್ಲಿದ್ದಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅಜ್ಜಿಯವರು ತೀರಿಕೊಂಡು ಸುಮಾರು 22 ರಿಂದ 23 ವರ್ಷ ಆಗಿರುತ್ತದೆ. ಅಜ್ಜಿಯವರು ಮರಣ ಹೊಂದಿದ ನತರ ದಾವಾ ಸ್ವತ್ತಿನ ಖಾತೆ ಅವರ ಮೂವರು ಮಕ್ಕಳ ಹೆಸರಿಗೆ ಖಾತೆ ಬದಲಾವಣೆ ಯಾಗಿರುವುದಿಲ್ಲ. ದಾವಾ ಸ್ವತ್ತಿನ ಖಾತೆ ಈಗ ವಾದಿಯ ಹೆಸರಿನಲ್ಲಿರುತ್ತದೆ. ದಾವಾ ಸ್ವತ್ತು ವಾದಿಯ ಹೆಸರಿಗೆ ಹೇಗೆ ಬಂದಿತು ಎಂದರೆ ಸಾಕ್ಷಿಯು ನನ್ನ ಅಜ್ಜಿಯವರು ಮರಣ ಶಾಸನ ಪತ್ರ ಮಾಡಿದ್ದು ಅದರಲ್ಲಿ ನನ್ನ ಭಾಗಕ್ಕೆ ಬಂದ ಜಮೀನನ್ನು ನನ್ನ ಹೆಂಡತಿಯ ಹೆಸರಿಗೆ ಮಾಡಿಸಿರುತ್ತೇನೆ. ನಾವು ಮೂರು ಜನ ಅಣ್ಣ ತಮ್ಮಂದಿರಾದ ಹುಲಿರಾಜರಾವ್, ರಾಘವೇಂದ್ರರಾವ್, ಹಾಗೂ ನಾನು ಹಂಚಿಕೊಂಡಿರುತ್ತೇವೆ. ಸದರಿ ವಿಭಾಗವು ಬರವಣಿಗೆಯಲ್ಲಾಗಿಲ್ಲ. ದಾವಾ ಆಸ್ತಿ ನನ್ನ ಹೆಸರಿಗೆ ಖಾತೆ ಬದಲಾವಣೆ ಆದ ದಿನಾಂಕ ನೆನಪಿರುವುದಿಲ್ಲ, ಸುಮಾರು 20 ವರ್ಷದ ಹಿಂದೆ ಆಗಿರುತ್ತದೆ. ನನ್ನ ಹೆಸರನಲ್ಲಿ ಬಂದ ಪಹಣಿಯನ್ನು ಹಾಜರುಪಡಿಸಿರುತ್ತೇನೆ.

ನನ್ನ ಅಜ್ಜಿಯವರಾದ ತುಂಗಮ್ಮನವರು ಮರಣ ಶಾಸನ ಪತ್ರ ಮಾಡಿರುತ್ತಾರೆ. ಸದರಿ ಮರಣ ಶಾಸನ ಪತ್ರವು ಸುಮಾರು 22-23 ವರ್ಷದ ಹಿಂದೆ ಮಾಡಿರುತ್ತಾರೆ. ಸದರಿ ಮರಣ ಶಾಸನ ಪತ್ರವು ನೊಂದಣಿಯಾಗಿರುವುದಿಲ್ಲ. ಸದರಿ ಮರಣ ಶಾಸನ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮರಣ ಶಾಸನ ಪತ್ರದಂತೆ ನನ್ನ ಹೆಸರಿಗೆ ಖಾತೆ ಬದಲಾವಣೆ ಯಾಗಿರುತ್ತದೆ. ಹಕ್ಕು ಬದಲಾವಣೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ಅಜ್ಜಿಯ ಹೆಸರಿನಲ್ಲಾಗಲಿ ನನ್ನ ಹೆಸರಿನಲ್ಲಾಗಲಿ ಇಲ್ಲದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿಯರ ಹೆಸರಿಗೆ ದಾವಾ ಸ್ವತ್ತು ಹೇಗೆ ಬಂದಿತು ಎಂದರೆ ಸಾಕ್ಷಿಯು ನಾನು ಅವರ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿದ್ದರಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಹೆಂಡತಿಯ ಹೆಸರಿಗೆ ದಾನಪತ್ರ, ಕ್ರಯಪತ್ರ, ಹಕ್ಕು ಬಿಡುಗಡೆ ಪತ್ರ ಮಾಡಿರುವುದಿಲ್ಲ. ನನ್ನಿಂದ ನನ್ನ ಹೆಂಡತಿಯ ಹೆಸರಿಗೆ ಯಾವುದೇ ಹಕ್ಕು ಬದಲಾವಣೆ ಆಗದ್ದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯರು ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಕಣಗಳಿದ್ದು ಅಲ್ಲಿ ಮನೆಗಳನ್ನು ಕಟ್ಟಿರುತ್ತಾರೆ. ದಾವಾ ಸ್ವತ್ತಿನ ಪಶ್ಚಿಮದಿಕ್ಕಿಗೆ ಯಾವುದೇ ಮನೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೇ ಮಾಡಿಸಿರುತ್ತೇವೆ. ಸರ್ವೇ ಕಾಲಕ್ಕೆ ಜಮೀನಿನ ಅಕ್ಕ ಪಕ್ಕದವರಿಗೆ ನೋಟಿಸ್ ನೀಡಿರುತ್ತಾರೆ. ಸುಮಾರು 4 ವರ್ಷಗಳ ಹಿಂದೆ ಸರ್ವೇ ಮಾಡಿಸಿರುತ್ತೇವೆ. ಸದರಿ ಸರ್ವೇ ಮಾಡಿಸಿದ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಜಮೀನಿಜಲ್ಲಿ 51 ಹುಣಸೆ ಮರಗಳು ಬರುತ್ತವೆ ಎಂಬ ಬಗ್ಗೆ ದಾಖಲಾತಿಗಳು ಇರುತ್ತವೆ, ಅದನ್ನು ಹಾಜರುಪಡಿಸಿರುತ್ತೇನೆ. ಈ ಕುರಿತಂತೆ ಪಹಣಿಗಳನ್ನು ಮತ್ತು ಸರ್ವೇ ವರದಿಯನ್ನು ಹಾಜರುಪಡಿಸಿರುತ್ತೇನೆ.

ನಿಪಿ 5 ಮತ್ತು 6 ರ ಕಲಂ ನಂಬರ 7 ರಲ್ಲಿ ಹುಣಸೆ ಮರಗಳ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಿಪಿ 6 ರ ಕಲಂ ನಂಬರ 11 ರಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ನಿಪಿ 5 ರ ಕಲಂ ನಂಬರ 11 ರಲ್ಲಿ ಮರಗಳ ಬಗ್ಗೆ ನಮೂದು ಇಲ್ಲ ಎದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಜಮೀನಿನಲ್ಲಿ 3 ಎಕರೆಯನ್ನು ಭೂ ಪರಿವರ್ತನೆ ಮಾಡಿಸಿರುವುದರಿಂದ ನಿಪಿ 5 ರಲ್ಲಿ ಮರಗಳ ಬಗ್ಗೆ ನಮೂದು ಇಲ್ಲ ಎಂದು ನುಡಿಯುತ್ತಾರೆ. ನಿಪಿ 6 ರ ಕಲಂ ನಂಬರ 11 ರಲ್ಲಿ ನಮೂದು ಇರುವ ಸರ್ವೇಯನ್ನು ಯಾವಾಗ ಮಾಡಿಸಿದ್ದೀರಿ ಎಂದರೆ ಸಾಕ್ಷಿಯು ಸರ್ವೆ ಮಾಡಿಸಿರುವುದಿಲ್ಲ, ಮುಂದುವರಿದು ಪಹಣಿಯಲ್ಲಿ ಮರಗಳ ಬಗ್ಗೆ ನಮೂದು ಬಿಟ್ಟು ಹೋಗಿದ್ದರಿಂದ ತಹಶಿಲ್ದಾರವರಿಗೆ ಅರ್ಜಿ ನೀಡಿದ ಮೇರೆಗೆ ಅವರು ಸರ್ವೆ ಅಧಿಕಾರಿಗಳಿಗೆ ಪರಿಶೀಲಿಸಿ ನಮುದು ಮಾಡುವಂತೆ ಆದೇಶಿಸಿದ ಮೇರೆಗೆ ನಮೂದು ಬಂದಿರುತ್ತದೆ ಎಂದು ನುಡಿಯುತ್ತಾರೆ. ತಹಶಿಲ್ದಾರವರಿಗೆ ನೀಡಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಹಶಿಲ್ದಾರವರು ಸದರಿ ಆದೇಶವನ್ನು ಒಂದುವರೆ ವರ್ಷದ ಹಿಂದೆ ಮಾಡಿರುತ್ತಾರೆ. ಸರ್ವೆ ಅಧಿಕಾರಿಗಳು ಯಾವ ಆಧಾರದ ಮೇಲೆ ಮರಗಳನ್ನು ನಮೂದು ಮಾಡಲು ವರದಿ ನೀಡಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ನಿಪಿ 4 ನ್ನು ಯಾವ ದಿನಾಂಕದಂದು ತಯಾರಿಸಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ 4 ನ್ನು ಈ ಪ್ರಕರಣದ ಅನುಕೂಲಕ್ಕಾಗಿ ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ.

ಸರ್ವೆ ನಂಬರ 629 ಡಿ1 ಜಮೀನಿನಲ್ಲಿ 3 ಎಕರೆ ಭೂಪರಿವರ್ತನೆಯಾಗಿರುತ್ತದೆ. ಸದರಿ ಭೂಪರಿವರ್ತನೆಯಾದ 3 ಎದರೆ ಜಮೀನನ್ನು ಸೈಟುಗಳಾಗಿ ಬದಲಾವಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ದಾಖಲಾತಿಗಳಲ್ಲಿ ಸೈಟುಗಳಾಗಿ ಬದಲಾವಣೆ ಯಾಗಿರುತ್ತದೆ. ವಾಸ್ತವಿಕವಾಗಿ ಸೈಟುಗಳನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಭೂ ಪರಿವರ್ತನೆಯಾದ ಜಮೀನಿನ ಪೈಕಿ ಶೇಕಡ 46 ರಷ್ಟು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಿಡಲಾಗಿರುತ್ತದೆ.

ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದರಿಂದ ಅನುಮತಿಸಿ ಕೇಸನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ; ಸಂಡೂರು.